ನನಗಷ್ಟೇ ತಿಳಿದಿತ್ತು. ಅದರ ಅಕ್ಕ–ಪಕ್ಕ ಅದೆಷ್ಟೊಂದು ಬದಲಾವಣೆಗಳಾದವು. ಬದಿಯ ಮೇಜಿನ ಮೇಲೆ ಹಲವು ದಶಕಗಳ ಹಿಂದಿನ ರೇಡಿಯೊ ಹೋಗಿ ಬಂದ ಬ್ಲಾಕ್ ಅಂಡ್ ವೈಟ್ ಟಿ.ವಿ. ಮತ್ತೆ ಕಲರಾಗಿ, ತನ್ನ ಗಾತ್ರದಲ್ಲಿ ಹಿಗ್ಗುತ್ತ ಈಗ ಹೋಮ್ ಥಿಯೇಟರ್ ಅನ್ನುವಂತಾದ್ರೂ ಈ ಕಪಾಟು ಸುತ್ತಲಿನ ಎಲ್ಲಾ ಆಕರ್ಷಣೆ–ವಿಕರ್ಷಣೆಗಳಿಗೂ ಅಲ್ಲವಾಗಿ ಸ್ವಯಂಪೂರ್ಣವಾಗಿ ನಿಂತಿತ್ತು. ಅರ್ಧ ಶತಮಾನದ ತನ್ನ ವಯಸ್ಸು ವ್ಯಕ್ತವಾಗದಂತೆ ಜಾಗರೂಕವಾದ ನಾಜೂಕಿತ್ತು. ಚಿಕ್ಕವರಿದ್ದಾಗ ಮಕ್ಕಳು ಎಳೆದ ಒಂದಷ್ಟು ಗೆರೆಗಳನ್ನು ಮಗನ ಮದುವೆ ಹೊತ್ತಿಗೆ ಒರಸಿಕೊಂಡು, ಹೊಸದಾಗಿ ಮತ್ತೇನನ್ನೊ ಸವರಿಕೊಂಡು ಇನ್ನಷ್ಟು ಕಳೆಗೂಡಿ ನಿಂತಿತ್ತು. ಈಗ ಇದನ್ನು ಜಾಗ ತಪ್ಪಿಸಿ ಯಾವುದೊ ಮೂಲೆಗಿಡುವುದು ಯಾತನೆ ಅನಿಸಿತು. 'ಅಮ್ಮ, ನಿನಗೆ ಹುಚ್ಚು ಮೋಹ, ಏನಾಗ್ತದೆ?' ಅಂದ ಮಗ. ಸೊಸೆ ನಡೆಸ್ತಾಯಿದ್ದ ಸಂಗೀತ ತರಗತಿಗಳಿಗೆ ಇನ್ನೂ ಹೆಚ್ಚಿನ ಮಕ್ಕಳು ಬರಲಿದ್ದರು. ಇನ್ನಷ್ಟು ಸ್ಥಳದ ಅಗತ್ಯ ಸ್ಪಷ್ಟವಾಗಿತ್ತು. ನನ್ನ ಒಪ್ಪಿಗೆ ತೀರ ಅನಿವಾರ್ಯ ಅನಿಸಿತ್ತು.

ಸ್ಥಾನಾಂತರಕ್ಕಾಗಿ ಅಲಮಾರಿಯ ಪುಸ್ತಕಗಳನ್ನು ಎತ್ತಿಡಬೇಕಾಗಿತ್ತು. ಮೊಮ್ಮಕ್ಕಳಿಬ್ಬರೂ ಉತ್ಸುಕತೆಯಿಂದ ಮುಂದಾದರು. ಅದರ ತುಂಬು ಎತ್ತರಕ್ಕೆ, ತಲೆಯ ಭಾಗದ ಕಿರೀಟದಂತಹ ರಚನೆಯ ಮೇಲೆ ಒಮ್ಮೆ ಕೈಯಾಡಿಸಿದೆ. ಹಿಂದೆ ಸವರಿದಾಗ ಬೆರಳಿಗೆ ಸಣ್ಣದೊಂದು ದೊರಗು ಮನವರಿಕೆಯಾಯ್ತು. ಹೌದಲ್ಲ, ಅರ್ಧಶತಮಾನದ ಹಿಂದೆ, ಇದನ್ನು ನಿರ್ಮಿಸಿದ ವೇಲಾಯುಧ ಆಚಾರಿ, ಕೆಲಸವೆಲ್ಲಾ ಮುಗಿದಾಗ ಅದರ ನೆತ್ತಿಯ ಮೇಲೆ–ಹಿಂದುಗಡೆ ತನ್ನ ಹೆಸರನ್ನು ಕೆತ್ತಿದ್ದ – ಸಣ್ಣದಾಗಿ – ತನ್ನ ನಿರ್ಮಾಣದ ಪ್ರತಿಯೊಂದು ವಸ್ತು ವೈವಿಧ್ಯದ ಮೇಲೆ ಪಿ.ಟಿ. ವೇಲು ಎಂದು ಮಲಯಾಳಂ ಭಾಷೆಯಲ್ಲಿ ಮೋಹಕವಾದುದೊಂದು ಸಹಿ ಮಾಡುತ್ತಿದ್ದ. ಅಂದಿನ ಆ ನಾಲ್ಕಕ್ಷರ ಮೂರು ತಲೆಮಾರುಗಳ ಸಾಕ್ಷಿ ಸ್ವರೂಪವಾಗಿ ಅಳಿಯದೆ ಉಳಿದಿತ್ತು. ಕಪಾಟಿನ ಕೆಲಸದ ಹೊತ್ತಿಗೆ ಹತ್ತರ ಹುಡುಗಿಯಾಗಿದ್ದ ನಾನು ಆ ಕಾರ್ಯಕ್ರಮದಲ್ಲಿ ಸೇರಿಕೊಂಡಾಗಿನ ಸ್ವಕೀಯ ಸಹವಾಸಗಳು ಮತ್ತು ಅದರೊಂದಿಗೆ ಆಚಾರಿಯೊಡನೆ ಹೆಣೆದುಕೊಂಡ ಸ್ನೇಹಾನುಬಂಧಗಳನ್ನು ಮರೆಯಲಾದೀತೆ? ಹಾಗೆಂದೇ ಈ ಅಸದೃಶ ವಸ್ತು ತವರಿನಿಂದ ನನ್ನೊಡನೇ ಬಂದು ತನ್ನ ಬಂಧ ಉಳಿಸಿ ನಿಂತಿದೆ. ಇಂದಿನಂತೆ ಯಂತ್ರಗಳ ನೆರವಿಲ್ಲದೆ, ಸಂಪೂರ್ಣ ಕೈಗೆಲಸದಲ್ಲಿ ತಯಾರಾದ ಅದರ ಅಂಗಾಂಗಗಳು ತಮ್ಮದೇ ಆದ ಅಚ್ಚುಕಟ್ಟುಗಳಲ್ಲಿ ಇಂದಿಗೂ ಗಮನೀಯವಾಗಿವೆ. ಅಚ್ಚ ಹಳದಿಯ ಹಲಸಿನ ಹಲಗೆಗಳ ನಡುವೆ ಅಲ್ಲಲ್ಲಿ ಕೆತ್ತಿ ಕೂರಿಸಿದ ಕಪ್ಪುಬೀಟೆಯ ಒಪ್ಪುವ ವಿನ್ಯಾಸಗಳು ವಿಸ್ಮಯದ ಭಾವದಲ್ಲಿ ತೋರುತ್ತವೆ. ಯಾವುದೊ ನಿಖರವಾದ ಅಳತೆಯ ಉದ್ದಗಲಗಳು ಅದರ ನಿಲುವಿಗೆ ನೀಡುವ ನಿರಾಳದಲ್ಲಿ ಕಂಡವರು ಅರಿಯುವ ಹಿರಿಮೆಯಿದೆ. ಒಮ್ಮೆ ಮೃದುವಾಗಿ ಕದತೆರೆದು ನೋಡುವ ತವಕವಿದೆ. ಇಷ್ಟು ವರ್ಷಗಳಲ್ಲಿ ಕುಂದದೆ ಉಳಿದುಕೊಂಡಿರುವ ಮರದ ಪರಿಮಳಕ್ಕೆ ಪುಸ್ತಕಗಳ ನಿತ್ಯ ನಿರ್ಮಲ ಕಂಪು ಬೆರೆತು ಚೇತೋಹಾರಿಯಾಗಿದೆ.

ಚೀಟಿ ಗುರುತಿನ ಬಿಳಿಯ ಬೈರಾಸನ್ನು ಹೆಗಲಿಗೆ ಹಾಕಿಕೊಂಡು, ಸಲಕರಣೆಗಳ ದೊಡ್ಡದೊಂದು ಕೈಚೀಲದೊಂದಿಗೆ ಮನೆಯ ಗೇಟಿನ ಬಳಿ ಕಾಣಿಸಿಕೊಂಡ ಆ ವ್ಯಕ್ತಿಯನ್ನು ಮೊದಲಿಗೆ ನಾನು ಭಯಮಿಶ್ರಿತ ವ್ಯಾಕುಲದಲ್ಲೇ ಎದುರಿಸಿದ್ದೆ. 'ಉಳ್ಳ್‌ಲೇಕ್ಕ್ ವಾ' ಅಪ್ಪ ಕರೆದೊಡನೆ ಅಂಗಳಕ್ಕೆ ಬಂದಾಗ, ಮಾತಾಡತೊಡಗಿದಾಗ ಗೊತ್ತಾಯಿತು, ಅವನು ಪರಿಪೂರ್ಣ ಮಲಯಾಳಿಯಾಗಿದ್ದ. ಮತ್ತು ನಮ್ಮ ಗಡಿನಾಡ ಪರಿಸರದಲ್ಲಿ ಅನಾಯಾಸ ಬಳಕೆಯಲ್ಲಿದ್ದ ನಾಲ್ಕಾರು ಭಾಷೆಗಳಲ್ಲಿ ಬೇರೆ ಯಾವ ಭಾಷೆಯೂ ಆತನಿಗೆ ಗೊತ್ತಿರಲಿಲ್ಲ. ಹಟ್ಟಿ–ಕೊಟ್ಟಿಗೆ ಬದಿಯ ಕೊಟ್ಟು–ಪಿಕಾಸಿನ ರೂಮಿನಲ್ಲಿ ಅವನ ವಾಸ್ತವ್ಯ ನಿರ್ಧಾರಿತವಾಯ್ತು. ಅಟ್ಟದಿಂದ ಇಳಿಸಿದ ಮರದ

